

# ಕವನಗಳ ಮಾಲೆ – ಕಥನ ಕಾವ್ಯ

## ಗಜಾನನ ಈಶ್ವರ ಹೆಗಡೆಯವರ ಎರಡು ಕೃತಿಗಳು




*ಕೃತಿ* : ರಸರಾಮಾಯಣ – ಎದೆಯ ಮೊಗ್ಗರಳಿ
*ಲೇಖಕರು* : ಗಜಾನನ ಈಶ್ವರ ಹೆಗಡೆ
*ಪ್ರಕಾಶಕರು* : ಶ್ರೀ ಸದ್ಗುರು ಪ್ರಕಾಶನ, ಹೊದಿಗೆರೆ, ಚೆನ್ನಗಿರಿ ತಾಲೂಕು, ಚಿತ್ರದುರ್ಗ-577215
*ಪುಟಗಳು* : 300
*ಬೆಲೆ* : 300/-(ಕ್ಯಾಲಿಕೊ ಪ್ರತಿ)
200/-(ಸಾದಾ ಪ್ರತಿ)




*ಕೃತಿ* : ಲೋಕ ಶಂಕರ
*ಲೇಖಕರು* : ಗಜಾನನ ಈಶ್ವರ ಹೆಗಡೆ
*ಪ್ರಕಾಶಕರು* : ಜಿ.ಎಸ್.ಎಲ್. ಪ್ರಕಾಶನ ನಂ. 1365, 2ನೇ ಮುಖ್ಯ ರಸ್ತೆ, 5ನೇ ಅಡ್ಡರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು-570004
*ಪುಟಗಳು* : 120
*ಬೆಲೆ* : 100/-

ಇಡೀ ರಾಮಾಯಣವನ್ನು ಹಲವು ಕವನಗಳ ಒಂದು ಗುಚ್ಛವಾಗಿಯೂ, ಬಿಡಿ ಬಿಡಿ ಕವನಗಳ ಮೂಲಕ ವಿಸ್ತಾರವಾದ ಕಥೆ ಮುಂದುವರಿಯುವಂತೆಯೂ ಕಾವ್ಯ ರಚಿಸಿದರೆ ಹೇಗಿರುತ್ತದೆ? ಅಂತಹ ಒಂದು ಸುಂದರ ಪ್ರಯತ್ನವೇ ಗಜಾನನ ಈಶ್ವರ ಹೆಗಡೆಯವರ '**ರಸರಾಮಾಯಣ – ಎದೆಯ ಮೊಗ್ಗರಳಿ**' ಎಂಬ ಕೃತಿ.

ಸಾಮಾನ್ಯವಾಗಿ ಎಲ್ಲರಿಗೂ ರಾಮಾಯಣದ ಕಥೆ ಗೊತ್ತೇ ಇದೆ. ಅದನ್ನು ಆದ್ಯಂತವಾಗಿ ನಿರೂಪಿಸದೆ, ಕೆಲವು ಘಟನೆಗಳನ್ನು ಮಾತ್ರ ನೆಪವಾಗಿಟ್ಟುಕೊಂಡು, ಅಲ್ಲಿನ ಭಾವವನ್ನು ಕವಿತೆಯನ್ನಾಗಿಸಿ ಬರೆದ ರಚನೆಗಳಿವು. ಒಂದು ರೀತಿಯಲ್ಲಿ ಈ ಕೃತಿಯಲ್ಲಿನ ನಿರೂಪಣಾಶೈಲಿಯನ್ನು 'ಭಾವಯಾನ' ವೆನ್ನಬಹುದು. ಘಟನೆಗಳಿಗಿಂತ ಒಂದೊಂದು ಭಾವ ಮುಖ್ಯ; ಘಟನೆ ಅಥವಾ ಸನ್ನಿವೇಶ ಹಿನ್ನೆಲೆಯಾಗಿದ್ದುಕೊಂಡು, ಭಾವ ಮುನ್ನೆಲೆಗೆ ಬರುವಂತೆ ಈ ಕವಿತೆಗಳು ಕೆಲಸ ಮಾಡುತ್ತವೆ. ಒಂದೊಂದು ಕವಿತೆಗಳೂ ಬಿಡಿ ಹೂಗಳಂತೆ – ಪ್ರತ್ಯೇಕ ಪ್ರತ್ಯೇಕವಾಗಿ ಅವು ಸುಗಂಧವನ್ನು ಬೀರಿಯೇ ಬೀರುತ್ತವೆ. ಆದರೆ ಅವುಗಳು ರಾಮಾಯಣ ಮಹಾಕಾವ್ಯದ ದಿವ್ಯಚರಿತೆಯನ್ನು ಬಿಟ್ಟಿರುವುದಿಲ್ಲ, ಅದರ ಪ್ರಬಂಧ ಧ್ವನಿಯತ್ತ ಕರೆದೊಯ್ಯುವ ಭಾವ ಪುಷ್ಪಗಳಾಗುತ್ತವೆ. ಸಂಪೂರ್ಣ ಕೃತಿಯು ಒಂದು ಸುಂದರ ಮಲ್ಲಿಗೆ ಮಾಲೆಯಂತೆ ನಿರಂತರ ಪರಿಮಳವನ್ನು ಬೀರುತ್ತಿರುತ್ತದೆ. ಪ್ರತಿ ಕವನಗಳ ಕೊನೆಯಲ್ಲಿ ಬರುವ 'ಎದೆಯ ಮೊಗ್ಗರಳಿ ಮಧು ದ್ರವಿಸಲಿ' ಎಂಬುದು ಕವಿಯ ಹಾರೈಕೆಯೋ, ರಸಯಾನದಲ್ಲಿ ಹೃದಯಗಳು ಭವ್ಯತೆಗೇರಲು ಮಾಡುವ ಪ್ರಾರ್ಥನೆಯೋ!

ಲೇಖಕರ ಅರಿಕೆ, ಕವಿ ಡಾ. ಹೆಚ್.ಎಸ್ ವೆಂಕಟೇಶಮೂರ್ತಿಯವರ ಮುನ್ನುಡಿ, ಕೊನೆಯಲ್ಲಿ ಬರುವ ಟಿಪ್ಪಣಿಗಳು, ಭಾವಗಳಿಗೆ ಸಂವಾದಿಯಾಗಿ ಬರುವ ರೇಖಾಚಿತ್ರಗಳು ಪುಸ್ತಕದ ಅಂದವನ್ನು ಹೆಚ್ಚಿಸಿವೆ. ಮನೆಯಲ್ಲಿ ಇಟ್ಟುಕೊಂಡು ಆಗಾಗ ಮೆಲುಕು ಹಾಕಬಹುದಾದ ಅತ್ಯಪೂರ್ವವಾದ ಕೃತಿರತ್ನವಿದು.

'**ಲೋಕ ಶಂಕರ**' ಈ ಕೃತಿಯೂ ರಸರಾಮಾಯಣದಂತೆಯೇ ಹಲವು ಬಿಡಿ ಕವನಗಳ ಒಂದು ಸಮುಚ್ಚಯವಾದರೂ, ಇದರ ರಚನೆ, ಭಾವ, ಸಂಯೋಜನೆಗಳು ತುಸು ಭಿನ್ನವಾಗಿದೆ. ಶ್ರೀಶಂಕರರ ಬಾಲ್ಯದ ಘಟನೆಗಳನ್ನು ಆಧರಿಸಿ ಬರೆದ ಈ ಕವಿತೆಗಳು ಗಾತ್ರದಲ್ಲಿ ತುಸು ದೀರ್ಘ; ಕಥನಶೈಲಿಯಲ್ಲೂ ತುಸು ವಿವರಣಾತ್ಮಕವಾಗಿದೆ. ಇಲ್ಲಿನ ಕವನಗಳು ಬಹುತೇಕ ಹಾಡುಗಳು, ಛಂದೋಲಯ ಬದ್ಧವಾದ ರಚನೆಗಳು. ಚಾರಿತ್ರಿಕ ಆಕರಗಳ ಅಭಾವವಿದ್ದರೂ, ಶ್ರೀಶಂಕರರ ಬಾಲ್ಯದ ಘಟನೆಗಳಿಗೆ ಸಾಮಾನ್ಯ ಬದುಕಿನ ಹಲವು ಚಿತ್ರಗಳನ್ನು ಕಲ್ಪಿಸಿ ಜೋಡಿಸಿರುವುದು ಕವಿಯ ಕಾಲ್ಪನಿಕ ಸಂಪನ್ನತೆಯನ್ನೂ ಸ್ವತಂತ್ರ ಆಲೋಚನೆಯ ಸೌಂದರ್ಯ ಪ್ರಜ್ಞೆಯನ್ನೂ ಸೂಚಿಸುತ್ತದೆ. 'ಸಂನ್ಯಾಸ ಸ್ವೀಕಾರ' ಎಂಬ ಹಾಡಿನಲ್ಲಿ ಬರುವ ಒಂದು ಚಿತ್ರಣ ಈ ಅಂಶವನ್ನು ತೋರಿಸಿಕೊಡಬಲ್ಲುದು:

'ಜೋರಲಿ ಅರಚುತ ನೀರನು ತುಯ್ಯುತ
ಮುಳುಗಿ ನೀರಿನಲಿ ಕದ್ದಡ್ಡಾಡುತ
ಉಬ್ಬಿಳಿಯುವ ಅಲೆ ಅಲೆಯಲಿ ತೇಲಿ
ದಣಿವರಿಯದೆ ಈಜಿದರೈ ಬಾಲರು ..
'ಅಮ್ಮಾ ಮಕರವು ಕಾಲನು ಹಿಡಿದು
ಭವ ಬಂಧನವನೆ ಕಡಿದಿತ್ತು
ಸಾಯುವ ಕ್ಷಣ ಎಚ್ಚರಿಸಿ ವಿವೇಕವು
ಮುಕ್ತಿಯ ವಸನವ ತೊಡಿಸಿತ್ತು'

ದಿವ್ಯಪುರುಷರ ಬಾಲ್ಯಲೀಲೆಗಳು ನಮಗೆ ಆತ್ಮೀಯವಾಗುವುದು ಅವರ ಅತಿಮಾನುಷ ದೈವೀಗುಣಗಳೊಂದಿಗೆ ಬೆರೆತ ಮಾನವೀಯ, ಸಹಜ-ಸಾಧಾರಣ ಕ್ರಿಯೆಗಳಿಂದ. ಶ್ರೀರಾಮ, ಶ್ರೀಕೃಷ್ಣರ ಕಥೆಗಳಂತೆ ಶ್ರೀಶಂಕರರ ಜೀವನವು ಪಾವನವೂ, ದಿವ್ಯವೂ ಆಗಿದ್ದರೂ ಅವರು ಎಲ್ಲೋ ದೂರದ ವ್ಯಕ್ತಿಗಳಾಗಿರದೆ, ನಮ್ಮ ನಡುವೆಯೇ ಬೆಳೆದ ಒಂದು ಮಗುವಿನಂತೆ ಇಲ್ಲಿ ಚಿತ್ರಿಸಲಾಗಿದೆ ಇದೇ ಈ ಕೃತಿಯ ವಿಶೇಷತೆಯಾಗಿದೆ.